ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 22/2019 ಸಿಡಬ್ಲೂ: 13 ಪಿ ಡಬ್ಲೂ: 5**

| | |
|---|---|
| ಹೆಸರು | ಕೆ. ಜವರಯ್ಯ |
| ತಂದೆಯ ಹೆಸರು | ಲೇಟ್ ಕರಗಯ್ಯ |
| ವಯಸ್ಸು | 57 ವರ್ಷ |
| ವೃತ್ತಿ | ಹಿರಿಯ ಮೋಟಾರ್ ವಾಹನ ನಿರೀಕ್ಷಕ, ಆರ್ ಟಿ ಒ, ಬೀದರ್ |
| ವಾಸ | ಬೀದರ್ |

ದಿನಾಂಕ: 03.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದ:</u>

1. ನಾನು ಆಗಸ್ಟ್ 2018 ರಿಂದ ಮಾರ್ಚ್ 2023 ರವರೆಗೂ ಮೋಟಾರ್ ವಾಹನ ನಿರೀಕ್ಷಕ, ಆರ್ ಟಿ ಒ, ಮಂಡ್ಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ: 28.11.2018 ರಂದು ಚಾಸಾ 18 ರವರಿಂದ ಮನವಿ ಬಂದ ಮೇರೆಗೆ ಅದೇ ದಿನ ಸಂಜೆ 4 ಗಂಟೆಗೆ ಶ್ರೀರಂಗಪಟ್ಟಣ ಪೊಲೀಸ್ ಠಾಣೆಯ ಆವರಣಕ್ಕೆ ತೆರಳಿ ಅಪಘಾತಕ್ಕೀಡಾದ ಎರಡೂ ವಾಹನಗಳನ್ನು ಪರಿಶೀಲನೆ ಮಾಡಿರುತ್ತೇನೆ. ವಾಹನ ಸಂಖ್ಯೆ 1- ಕೆಎ-45-ಕೆ-4181 ಹಿರೋ ಹೋಂಡಾ ಮೋಟಾರ್ ಸೈಕಲ್ ಆಗಿದ್ದು, ಸದರಿ ವಾಹನವನ್ನು ಪರಿಶೀಲಿಸಲಾಗಿ ಅದರ ಫ್ರಂಟ್ ಹೆಡ್ ಲೈಟ್, ರೈಟ್ ರೇರ್ view ಮಿರರ್, ರೈಟ್ ಮತ್ತು ಲೆಫ್ಟ್ ಇಂಡಿಕೇಟರ್ ಜಖಂ ಆಗಿತ್ತು ಹಾಗೂ ರೇರ್ ಬ್ರೇಕ್ ಲೈಟ್, ಬಲ ಮತ್ತು ಎಡ ಇಂಡಿಕೇಟರ್,

ಸಾರಿ ಗಾಡ್ ಜಖಂ ಆಗಿದ್ದವು ಮತ್ತು ರೇರ್ ಪೀಲಿಯನ್ ರೈಡರ್ ಹ್ಯಾಂಡಲ್ ಗ್ರಿಪ್ ಜಖಂ ಆಗಿತ್ತು.

3. ವಾಹನ ಸಂಖ್ಯೆ 2 ಟಿ ಎನ್-33 ಎಯು-4907 ಹೆಚ್ ಜಿ ವಿ ಅಶೋಕ್ ಲೈಲೇಂಡ್ ಲಾರಿ ಆಗಿದ್ದು, ಸದರಿ ವಾಹನವನ್ನು ಪರಿಶೀಲಿಸಲಾಗಿ ಅದರಲ್ಲಿ ಯಾವುದೇ ಜಖಂಗಳು ಕಂಡು ಬಂದಿರುವುದಿಲ್ಲ. ವಾಹನ ಸಂಖ್ಯೆ 1 ಅನ್ನು ನಿಶ್ಚಲ ಸ್ಥಿತಿಯಲ್ಲಿ ಪರಿಶೀಲಿಸಲಾಗಿ ಅದರ ಬ್ರೇಕ್ ನಲ್ಲಿ ಯಾವುದೇ ಅಡೆತಡೆ ಇರಲಿಲ್ಲ ಹಾಗೂ ಯಾಂತ್ರಿಕವಾಗಿ ಸುಸ್ಥಿತಿಯಲ್ಲಿ ಇತ್ತು. ವಾಹನ ಸಂಖ್ಯೆಃ 2 ಅನ್ನು ಚಾಲನಾ ಸ್ಥಿತಿಯಲ್ಲಿ ಪರಿಶೀಲಿಸಲಾಗಿ ಅದರ ಬ್ರೇಕ್ ನಲ್ಲಿ ಯಾವುದೇ ಅಡೆತಡೆ ಇರಲಿಲ್ಲ ಹಾಗೂ ಯಾಂತ್ರಿಕವಾಗಿ ಸುಸ್ಥಿತಿಯಲ್ಲಿ ಇತ್ತು. ಅಪಘಾತವು ಸದರಿ ವಾಹನಗಳ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತೇನೆ. ಸಾಕ್ಷಿ ಐ ಎಂ ವಿ ವರದಿಯನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಐ ಎಂ ವಿ ವರದಿಯನ್ನು ನಿಪಿ 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ 2 ಪೋಟೋಗಳನ್ನು ನೋಡಿ ಅದು ಅವರು ತಪಾಸಣೆ ಮಾಡಿರುವ ದ್ವಿ ಚಕ್ರ ವಾಹನ ಎಂದು ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ನಿಪಿ 11 ಮತ್ತು 12 ಎಂದು ಗುರುತಿಸಲಾಗಿದೆ. (ಸದರಿ ಪೊಟೋಗಳಿಗೆ ಕಲಂ 65ಬಿ ಪ್ರಮಾಣ ಪತ್ರ ಇಲ್ಲದ ಕಾರಣ ಆರೋಪಿ ಪರ ವಕೀಲರ ಆಕ್ಷೇಪಣೆ ಒಳಪಟ್ಟು ಗುರುತಿಸಲಾಗಿದೆ).

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್ ಎಂ ಆರ್ ವಕೀಲರಿಂದಃ</u>

ಪೊಲೀಸರು ನನಗೆ ನೀಡಿರುವ ನೋಟೀಸ್ ಅಲ್ಲಿ ಅಪಘಾತ ಯಾವ ದಿನ ಆಗಿದೆ ಎಂದು ತಿಳಿಸಿರುವ ಬಗ್ಗೆ ನಾನು ಗಮನಿಸಿರುವುದಿಲ್ಲ. ನಾನು ತಪಾಸಣೆ ಮಾಡಿದಾಗ ಲಾರಿಯ ಬಣ್ಣ ದ್ವಿ

ಚಕ್ರ ವಾಹನದ ಮೇಲೆ ಅಥವಾ ದ್ವಿ ಚಕ್ರ ವಾಹನದ ಬಣ್ಣ ಲಾರಿಯ ಮೇಲೆ ಕಂಡು ಬಂದಿರುವುದಿಲ್ಲ. ನಿಪಿ10 ರಲ್ಲಿ ಕಂಡು ಬರುವ ಜಖಂ ಗಳು ಒಬ್ಬ ವ್ಯಕ್ತಿ ಅತಿವೇಗ ಹಾಗೂ ಅಜಾಗರೂಕತೆಯಿಂದ ವಾಹನವನ್ನು ಚಲಾಯಿಸಿ ಆಯ ತಪ್ಪಿ ಬಿದ್ದಾಗ ಆಗುತ್ತದೆ ಎಂದರೆ ಸಾಕ್ಷಿ ಸಾಧ್ಯತೆಗಳಿದೆ ಎಂದು ನುಡಿಯುತ್ತಾರೆ. ಅಪಘಾತವನ್ನು ಲಾರಿ ಚಾಲಕ ಮಾಡಿದ್ದಾನೆ ಎಂಬ ಬಗ್ಗೆ ಯಾವುದೇ ರೀತಿಯ ಕುರುಹುಗಳು ಕಂಡು ಬಂದಿಲ್ಲ ಎಂದರೆ ಸಾಕ್ಷಿ ನಾನು ಸ್ದಳಕ್ಕೆ ಹೋಗಿ ತಪಾಸಣೆ ಮಾಡಿದೇ ಇರುವ ಕಾರಣಕ್ಕೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಅಪಘಾತ ಯಾರ ತಪ್ಪಿ ನಿಂದ ಆಗಿದೆ ಎಂದು ನಾನು ಹೇಳಲು ಸಾಧ್ಯವಿಲ್ಲ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*